ಅಲ್ಲಿ ಈಗಾಗಲೇ ಲ್ಯಾಂಡ್ ದೊರೆತ್ತಿದ್ದರೆ ಆದಷ್ಟು ಬೇಗ ಪುನರ್‌ವಸತಿ ಕಲ್ಪಿಸಿ ಕೊಡಬಹುದಾಗಿತ್ತು. ಆದರೆ ಅಲ್ಲಿ ಏನು ತೊಂದರೆಯಾಗಿದೆ ಎಂದರೆ, the railway line is coming in our way and also a temple. The Hon'ble Member knows all these difficulties. I have instructed the D.C. to declare that as a slum. Even the local MP has told me that if we are rehabilitating, he will be giving Rs. 25 Lakhs. ನಾನು ಈಗಾಗಲೇ ಹೇಳಿದಂತೆ ಅಲ್ಲಿ ಪುನರ್‌ವಸತಿ ಸೌಕರ್ಯ ಒದಗಿಸಿಕೊಡುವುದಕ್ಕೋಸ್ಕರ ಲ್ಯಾಂಡ್ ಸಿಗುತ್ತಿಲ್ಲ. ನಮಗೆ ಆದಷ್ಟು ಬೇಗ 5 ಎಕರೆ ಜಾಗವನ್ನು ಒದಗಿಸಿಕೊಡಬೇಕೆಂದು ಈಗಾಗಲೇ ಡಿ.ಸಿ. ಯವರಲ್ಲಿ ಕೇಳಲಾಗಿದೆ. ಆದ್ದರಿಂದ ಜಾಗ ದೊರೆತ ತಕ್ಷಣವೆ ಖಂಡಿತವಾಗಿಯೂ ಕೂಡ ಆದಷ್ಟು ಬೇಗ ಪುನರ್ ವಸತಿ ಸೌಕರ್ಯವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು : ಇದಕ್ಕೆ ಇನ್ನು ಸುಮಾರು ಐದಾರು ವರ್ಷ ಬೇಕೆ? ಅಥವಾ ಮತ್ತೊಂದು ಸಾರಿ ಬೆಂಕಿ ಬಿದ್ದ ಮೇಲೆ ಮಾಡುತ್ತೀರಾ? ಇಲ್ಲಿ ಪುನರ್‌ವಸತಿ ಕಾರ್ಯವನ್ನು ಇನ್ನು ಎಷ್ಟು ದಿವಸದಲ್ಲಿ ಮಾಡಲಾಗುತ್ತದೆ ಎಂಬುದರ ಬಗ್ಗೆ ಒಂದು ನಿಗದಿತ ಅವಧಿಯನ್ನು ಈ ಸಂಧರ್ಭದಲ್ಲಿ ಹೇಳಬೇಕು.

ಶ್ರೀ ಖಮರುಲ್ ಇಸ್ಲಾಂ : ನಾನು ಈಗಾಗಲೇ ಹೇಳಿದ ಪ್ರಕಾರ ಅಲ್ಲಿ ಜಾಗ ದೊರೆತ ತಕ್ಷಣವೇ ಅಲ್ಲಿನ ಸಂತ್ರಸ್ತರಿಗೆ ಪುನರ್ ವಸತಿ ಕಲ್ಪಿಸಿಕೊಡಲಾಗುತ್ತದೆ.

(vi). ವಿಷಯ ಈ ಇಂತೂರಿನಲ್ಲಿರುವ ಶ್ರೀ ಮಹದೇಶ್ವರ ಸಕ್ಕರೆ ಕಾರ್ಖಾನೆಯಿಂದ ರೈತರಿಗೆ ಬರಬೇಕಾದ ಬಾಕಿಯ ಬಗ್ಗೆ.

+ ಶ್ರೀ ಹೆಚ್. ಎಸ್. ಮಜಹದೇವಪ್ರಸಾದ್ (ಗುಂಡ್ಲುಪೇಟೆ) : ಸನ್ಮಾನ್ಯ ಅಧ್ಯಕ್ಷರೆ, ಚಾಮರಾಜನಗರ ಜಿಲ್ಲೆ, ಕಂತೂರಿನಲ್ಲಿರುವ ಶ್ರೀ ಮಹದೇವ ಸಕ್ಕರೆ ಕಾರ್ಖಾನೆಯವರು ಕಳೆದ ನಾಲ್ಕು ತಿಂಗಳಿಂದ ಸುಮಾರು 8 ಕೋಟಿ ರೂಪಾಯಿಗಳಷ್ಟು ಹಣವನ್ನು ಕಬ್ಬು ನೀಡಿದಂಥ ರೈತರಿಗೆ ಬಾಕಿ ಕೊಡಬೇಕಾಗಿದೆ. ಆದರೆ, ಇಲ್ಲಿಯವರೆಗೆ ಈ ಹಣವನ್ನು ಪಾವತಿ ಮಾಡುವುದ್ಕೆ ಕಾರ್ಖಾನೆಯ ಮಾಲೀಕರು ವಿಳಂಬ ಮಾಡುತ್ತಿದ್ದಾರೆ. ಕಾರ್ಖಾನೆಯ ಮುಂದೆ ರೈತರು ಪ್ರತಿದಿವಸ ಧರಣಿ, ಸತ್ಯಾಗ್ರಹ ಮತ್ತು ಚಳುವಳಿ ಮಾಡತಕ್ಕಂಥ ಕಾರ್ಯವನ್ನು ಹಮ್ಮಿಕೊಂಡಿದ್ದಾರೆ. ಇವತ್ತಿನ ದಿವಸ ಕಾರ್ಖಾನೆಯ ಮುಂದೆ ಒಂದಲ್ಲಾ ಒಂದು ರೀತಿಯಲ್ಲಿ ಚಳುವಳಿ ನಡೆಯುತ್ತಿದೆ. ಸದರಿ ಕಂಪನಿಯಿಂದ ರೈತರಿಗೆ ಕೊಡಬೇಕಾದ ಬಾಕಿ ಹಣವನ್ನು ಕೊಡದೇ ಇರುವುದರಿಂದ ರೈತರು ಸಾಲ ತೆಗೆದುಕೊಂಡಿರತಕ್ಕಂಥ ಬ್ಯಾಂಕ್‌ನವರು ರೈತರ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಈ ಒಂದು ಕಾರ್ಖಾನೆಯಲ್ಲಿ ಸರಿಯಾಗಿ ಕಬ್ಬು ಅರೆಯತಕ್ಕಂಥ ಕೆಲಸ ಆಗುತ್ತಿಲ್ಲ. ಹಾಗೆಯೇ ಆಗಾಗ ಕಾರ್ಖಾನೆಯನ್ನು ಮುಚ್ಚತಕ್ಕಂಥ ಕೆಲಸವನ್ನು ಮಾಡುತ್ತಿದ್ದಾರೆ. ಈಗಾಗಲೇ ಸದರಿ ಕಾರ್ಖಾನೆಯ ಮಾಲೀಕತ್ವದಲ್ಲಿ ಎರಡು-ಮೂರು ಬದಲಾವಣೆಯಾಗಿದೆ. ಈ ಕಾರ್ಖಾನೆಯ ನಿಜವಾದ ವಾರಸ್ತುದಾರರು ಯಾರೆಂಬುದು ಅಲ್ಲಿನ ರೈತರಿಗೆ ಇದುವರೆಗೂ ತಿಳಿದಿಲ್ಲ. ಈ ಸಂದರ್ಭದಲ್ಲಿ ಕಾರ್ಖಾನೆಯ ಮಾಲೀಕರ ಮೇಲೆ ಬಿಗಿಯಾದ ಕ್ರಮವನ್ನು ಜರುಗಿಸಿ ರೈತರಿಗೆ ಬರಬೇಕಾದ ಬಾಕಿ ಹಣವನ್ನು ಕೊಡಿಸುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು.

ಕಾರ್ಖಾನೆಯವರು ಆದಷ್ಟು ಬೇಗ ಹಣವನ್ನು ಕೊಡದೇ ಇದ್ದರೆ ಅಮರಣ ಸತ್ಯಾಗ್ರಹ ಮಾಡುತ್ತೇವೆಂದು ರೈತರು ಹೇಳಿದ್ದಾರೆ. ಮೂರು ಲಕ್ಷ ಟನ್ ಕಬ್ಬು ಅರೆಯುತ್ತೇವೆಂದು ಕಾರ್ಖಾನೆಯವರು ಈಗಾಗಲೇ ಅಗ್ರಿಮೆಂಟ್ ಮಾಡಿಕೊಂಡಿದ್ದಾರೆ. ಆದರೆ ಏಪ್ರಿಲ್ ತಿಂಗಳಲ್ಲಿ ಕಾರ್ಖಾನೆಯನ್ನು ಮುಚ್ಚುತ್ತೇವೆಂದು ಹೇಳುತ್ತಿರುವಾಗ ಬಾಕಿ ಉಳಿದಿರತಕ್ಕಂಥ ಎರಡೂವರೆ ಲಕ್ಷ ಟನ್ ಕಬ್ಬನ್ನು ಅರೆಯುವುದಕ್ಕೆ ಸಾಧ್ಯವಿದೆಯೇ? ಇದರ ಬಗ್ಗೆ ಮಾನ್ಯ ಸಚಿವರು ಗಮನ ಹರಿಸಿ, ರೈತರಿಗೆ ಆಗತಕ್ಕಂಥ ತೊಂದರೆಗಳನ್ನು ತಪ್ಪಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಜಿ. ರಾಜುಗೌಡ (ಹನೂರು) : ಸನ್ಮಾನ್ಯ ಅಧ್ಯಕ್ಷರೆ, ಶ್ರೀ ಮಹದೇವ ಸಕ್ಕರೆ ಕಾರ್ಖಾನೆಯಿಂದ ರೈತರಿಗತ ಸುಮಾರು 9 ಕೋಟಿ ರೂಪಾಯಿಗಳಷ್ಟು ಬಾವಿ ಹಣ ಬರಬೇಕಾಗಿದೆ. ಈ ವಿಷಯಕ್ಕೆ ಸಂಬಂಧಪಟ್ಟಂತೆ ಸಕ್ಕರೆ ಕಛೇರಿಯಲ್ಲಿ ಸಭೆ ನಡೆಯಿತು. ಆ ಸಂಧರ್ಭದಲ್ಲಿ ಕಾರ್ಖಾನೆಯ ಮಾಲೀಕರು ಏನೆಂದು ವಾಗ್ದಾನ ಕೊಟ್ಟಿದ್ದರೊ ಅದರಂತೆ ಕೆಲಸ ಆಗಿಲ್ಲ. ಪ್ರತಿದಿವಸ ಕಾರ್ಖಾನೆಯ ಮುಂದೆ ಈ ವಿಷಯಕ್ಕೆ ಸಂಬಂದಪಟ್ಟಂತೆ ಚಳುವಳಿ ನಡೆಯುತ್ತಿದೆ. 10ನೇ ತಾರೀಖು ಸನ್ಮಾನ್ಯ ಮುಖ್ಯಮಂತ್ರಿಯವರು ನಮ್ಮ ಕ್ಷೇತ್ರಕ್ಕೆ ಬಂದಂಥ ಸಂಗರ್ಭದಲ್ಲಿ ರೈತರು ಮಾನ್ಯ ಮುಖ್ಯಮಂತ್ರಿಯವರಿಗೆ ಒಂದು ಮನವಿಯನ್ನು ಕೊಟ್ಟು, ನಮ್ಮ ಹಣವನ್ನು ಸಕ್ಕರೆ ಕಾರ್ಖಾನೆಯವರಿಂದ ಆದಷ್ಟು ಬೇಗ ಕೊಡಿಸದಿದ್ದರೆ, ನಾವು ಉಪವಾಸ ಸತ್ಯಾಗ್ರಹ ಮಾಡಿ ಸಾಯುತ್ತೇವೆಂದು ಹೇಳಿದರು. ಆದ್ದರಿಂದ ಮಾನ್ಯ ಸಕ್ಕರೆ ಸಚಿವರು ದಯಮಾಡಿ ತಮ್ಮ ಕಾರ್ಯಾಲಯಕ್ಕೆ 24 ಗಂಟೆಯೊಳಗೆ ಕಾರ್ಖಾನೆಯ ಮಾಲೀಕರು ಮತ್ತು ತಮ್ಮಗಳನ್ನು ಕರೆಸಿ ಆದಷ್ಟು ಬೇಗ ರೈತರ ಬಾಕಿ ಹಣವನ್ನು ಪಾವತಿ ಮಾಡಿಸುವಂಥ ಕಾರ್ಯವನ್ನು ಮಾಡಬೇಕೆಂದು ಅಧ್ಯಕ್ಷರ ಮುಖಾಂತರ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

1.40 ಪಿ.ಎಂ.

ಶ್ರೀ ಎ.ಆರ್. ಕೃಷ್ಣಮೂರ್ತಿ (ಸಂತೆಮರಳ್ಳಿ) : ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಜಿಲ್ಲೆಯ ಸಕ್ಕರೆ ಕಾರ್ಖಾನೆಯ ಬಗ್ಗೆ ಮಾನ್ಯ ಸದಸ್ಯರುಗಳಾದ ಶ್ರೀ ಹೆಚ್.ಎಸ್. ಮಹದೇವಪ್ರಸಾದ್ ಮತ್ತು ಶ್ರೀ ಜಿ.ರಾಜೂಗೌಡರವರು ಪ್ರಸ್ತಾಪ ಮಾಡಿದ್ದಾರೆ. ತಮಗೆ ಗೊತ್ತಿರುವ ಹಾಗೆ ಇದು ಸಹಕಾರಿ ಕ್ಷೇತ್ರಕ್ಕೆ ಸಂಬಂಧಪಟ್ಟಂತಹ ಸಕ್ಕರೆ ಕಾರ್ಖಾನೆ ಆಗಿತ್ತು. ನಂತರ ಇದು ಸುಮಾರು ಮೂರು ಮಾಲೀಕರಿಗೆ on the record ಹಸ್ತಾಂತರವಾಗಿತ್ತು, ಇದು ಸರ್ಕಾರದ ಗಮನಕ್ಕೆ ಬಂದಿದೆಯೋ ಏನೋ ಗೊತ್ತಿಲ್ಲ; ಇಲ್ಲವೆಂದು ನಾನು ಭಾವಿಸುತ್ತೇನೆ. ಹಿಂದೆ ಖೋಡೇಸ್‌ರವರು ನಡೆಸುತ್ತಿದ್ದರು, ನಂತರ ನಾಗಾರ್ಜುನ ಗ್ರೂಪ್ ಆಫ್ ಕಂಪನೀಸ್‌ರವರು ನಡೆಸುತ್ತಿದ್ದರು, ಈಗ ಅರುಣ್ ಶುಗರ್ಸ್ ಎಂಬುವವರು ನಡೆಸುತ್ತಿದ್ದಾರೆಂದು ತಿಳಿದುಬಂದಿದೆ. ಇದಕ್ಕೆ ನಿಜವಾದ ಮಾಲೀಕರು ಯಾರು ಎಂಬ ಬಗ್ಗೆ ಸರ್ಕಾರ ಸ್ಪಷ್ಟೀಕರಣವನ್ನು ಕೊಡಬೇಕು. ಸುಮಾರು 9 ಕೋಟಿ ರೂಪಾಯಿಗಳು ಏನು ರೈತರಿಗೆ ಬರಬೇಕಾದ ಬಾಕಿ ಉಳಿದಿದೆ ಅದನ್ನು ಆದಷ್ಟು ಬೇಗ ರೈತರಿಗೆ ತಲುಪಿಸುವಂತಹ ಕೆಲಸವನ್ನು ಸರ್ಕಾರ ಮಾಡಬೇಕಾಗಿದೆ. ಅಗ್ರಿಮೆಂಟ್ ಮಾಡಿದ ಕಬ್ಬನ್ನು ಕಾರ್ಖಾನೆಯ ಮಾಲೀಕರು ತೆಗೆದುಕೊಂಡು ಕ್ರಷ್ ಮಾಡುವಂತಹ ಕೆಲಸವನ್ನು ಮಾಡಬೇಕು ಮತ್ತು ಸರಿಯಾದ ರೀತಿಯಲ್ಲಿ ಕಾರ್ಖಾನೆಯನ್ನು ನಡೆಸಿಕೊಂಡು ಹೋಗಲು ಸರ್ಕಾರವು ನಿರ್ದೇಶನವನ್ನು ಕೊಡಬೇಕೆಂದು ನಾನು ತಮ್ಮ ಮೂಲಕ ಅವರಲ್ಲಿ ಕೇಳುತ್ತೇನೆ.

+ಶ್ರೀ ಎ. ಕೃಷ್ಣಪ್ಪ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಮೂರು ಸದಸ್ಯರುಗಳು ಹೇಳಿದ ವಿಷಯದಲ್ಲಿ ಸತ್ಯವಿದೆ. ಈ ವಿಚಾರವನ್ನು 15 ದಿವಸಗಳ ಹಿಂದೆ ಎಂಎಲ್‌ಎಗಳು ಮತ್ತು ಆ ಕಡೆಯ ರೈತಬಂಧುಗಳು ನನ್ನ ಗಮನಕ್ಕೆ ತಂದಾಗ ತಕ್ಷಣ ನಾನು ಚೆನ್ನೈನಿಂದ ಅವರನ್ನು ಕರೆಸಿದೆ. ಪೊಲೀಸ್ ಅರೆಸ್ಟ್ ಮಾಡಲಿಲ್ಲ, ಬಲಾತ್ಕಾರವಾಗಿ ಸಭೆಯನ್ನು ನಡೆಸಿದ್ದು, ಅವರು 8 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಬಾಕಿ ಹಣ ಇರುವುದನ್ನು ಒಪ್ಪಿಕೊಂಡಿದ್ದಾರೆ. ಆದರೆ ದುರಾದೃಷ್ಟವಶಾತ್ ಇಲ್ಲಿ ಮೂರು ಜನ ಮಾಲೀಕರುಗಳು ಬದಲಾವಣೆಯಾಗಿದ್ದಾರೆ. ಈಗ ಮೂರನೇ ಮಾಲೀಕರು ಅರುಣ್ ಶುಗರ್ಸ್ ಎಂದು ಒಪ್ಪಿಕೊಂಡಿದ್ದಾರೆ, ಅರುಣ್ ಶುಗರ್ಸ್‌ನವರಿಗೆ 100 ಪರ್ಸೆಂಟ್ ಲೀರಲ್ ಆಗಿ ಎಲ್ಲಾ ಟ್ರಾನ್ಸ್‌ಫರ್ ಆಗಿಲ್ಲ. ಟ್ರಾನ್ಸ್‌ಫರ್ ಆಗುವಂತಹ ಟ್ರಾನ್ಸ್‌ರ್ ಪೀರಿಯಡ್‌ನಲ್ಲಿ ಒಬ್ಬ ಹೊಸ ಮಾಲೀಕರು ಬಂದಿದ್ದಾರೆ. ಆ ಹೊಸ ಮಾಲೀಕರ ಜೊತೆ ಮಾತುಕತೆ ನಡೆಸಿದ್ದು ಅವರು ಸ್ವಲ್ಪ ಹಣವನ್ನು ಬಿಡುಗಡೆ ಮಾಡಿದರೆ. ಅಂದರೆ ಸುಮಾರು 80 ಲಕ್ಷ ರೂಪಾಯಿಗಳವರೆಗೂ ಕೊಟ್ಟಿದ್ದಾರೆ, ಅವರ ಮಾತಿನ ಪ್ರಕಾರ 2 ಕೋಟಿ ರೂಪಾಯಿಗಳನ್ನು 28ನೇ ತಾರೀಖಿನೊಳಗಾಗಿ ಕೊಡಬೇಕಾಗಿತ್ತು, ಕೊಟ್ಟಿಲ್ಲ. ಇತ್ತೀಚೆಗೆ ಮಾನ್ಯ ಮುಖ್ಯಮಂತ್ರಿಗಳು ಅಲ್ಲಿಗೆ ಭೇಟಿ ನೀಡಿದಾಗ ಮನವಿ ಪತ್ರವನ್ನು ಕೊಟ್ಟು ರೈತರ ಪ್ರತಿನಿಧಿಗಳೆಲ್ಲಾ ಈ ವಿಚಾರವನ್ನು ಪ್ರಸ್ತಾಪಿಸಿದ್ದು ಮುಖ್ಯಮಂತ್ರಿಗಳು ನಿನ್ನೆ ಬೆಳಿಗ್ಗೆ ನನ್ನನ್ನು ಕರೆದು ಅವರ ಮೆಮೋರ್ಯಾಂಡಮ್‌ನ್ನು ನನಗೆ ಕೊಟ್ಟು ಮಾತುಕತೆಯಾಡಿ ತುರ್ತಾಗಿ ಕಂಡುಹಿಡಿಯಬೇಕೆಂದು ಹೇಳಿದ್ದಾರೆ. ನಾನು ಆ ಮಾಲೀಕರನ್ನು ಹಿರಿಯ ಅಧಿಕಾರಿಗಳನ್ನು ನಿನ್ನೆಯ ದಿನ ಕರೆಸಿ ಮಾತನಾಡಿದ್ದೇನೆ. ಅವರು 10 ದಿವಸಗಳ ಕಾಲ ಸಮಯವನ್ನು ತೆಗೆದುಕೊಂಡಿದ್ದಾರೆ, ಯುಗಾದಿ ಹಬ್ಬದೊಳಗಾಗಿ ಕಡೆಯ ಪಕ್ಷ 2 ಕೋಟಿ ರೂಪಾಯಿಗಳನ್ನಾದರೂ ಹಣವನ್ನು ರೈತರಿಗೆ ಕೊಡಬೇಕೆಂಬ ಒತ್ತಾಯವನ್ನು ಅವರ ಮೇಲೆ ಹಾಕಿದ್ದೇವೆ. ಬಿಡಿಸಿಸಿ ಬ್ಯಾಂಕ್, ಅಪೆಕ್ಸ್ ಬ್ಯಾಂಕ್, ಬೆಂಗಳೂರು ಮ್ಯಾನೇಜಿಂಗ್ ಡೈರೆಕ್ಟರ್‌ರವರೊಡನೆ ಮಾತನಾಡಿ, ನಮ್ಮ ಹತ್ತಿರವಿರುವ ಮಾಲು ಏನಿದೆ, ಅದರ ವಿರುದ್ಧ 5 ಕೋಟಿ ರೂಪಾಯಿಗಳ ಸಾಲವನ್ನು ಕೊಡಿ, ಬೇಕಾದಷ್ಟು ದಾಸ್ತಾನು ಇವೆ ಎಂದು ಹೇಳಿದ್ದೇವೆ. ನಾಲಿದ್ದು ನಡೆಯುವ ಸಭೆಯಲ್ಲಿ ಆ ವಿಚಾರವನ್ನು ಪ್ರಸ್ತಾಪಿಸಲಾಗುತ್ತದೆ, ಬಹುಶಃ 5 ಕೋಟಿ ರೂಪಾಯಿಗಳ ಸಾಲ ಬಿಡುಗಡೆಯಾದರೆ ಅದರಲ್ಲಿ ನೇರವಾಗಿ 4 ಕೋಟಿ ರೂಪಾಯಿಗಳನ್ನು ರೈತರಿಗೆ ಕೊಡುತ್ತೇವೆಂದು ಮಾತು ಕೊಟ್ಟು ಹೋಗಿದ್ದಾರೆ. ಉತ್ಪಾದನೆಗೆ ಸಂಬಂಧಿಸಿದಂತೆ ಕಬ್ಬನ್ನು ಸಂಪೂರ್ಣವಾಗಿ ಅರೆಯುವ ವಿಚಾರದಲ್ಲಿ ಯಂತ್ರೋಪಕರಣಗಳು ಏನು ಶಿಥಿಲವಾಗಿದೆ, ಅದೆಲ್ಲವನ್ನು ರಿಪೇರಿ ಮಾಡಿಸಿ ಕೆಲಸ ಮಾಡುತ್ತಿದ್ದಾರೆ. ಎಷ್ಟು ಕ್ವಾಂಟಿಟಿ ಶುಗರ್ ಕೇನ್ ಇದೆಯೋ ಅದನ್ನು ಸಂಪೂರ್ಣವಾಗಿ ಅರೆಯುವಂತಹ ಕೆಲಸವನ್ನು ನಾನು ಮಾಡುತ್ತೇನೆಂದು ಹೇಳಿ ನಮಗೆ ವಾಗ್ದಾನವನ್ನು ಕೊಟ್ಟಿದ್ದಾರೆ. ಆದ್ದರಿಂದ 8 ದಿನಗಳ ಸಮಯವನ್ನು ಕೊಟ್ಟಿದ್ದು, ಆ ಆಡಳಿತ ವರ್ಗದ ಮಾಲೀಕರು ಅರುಣ್ ಶುಗರ್ಸ್‌ರವರು ಬಂದಿದ್ದರು, ಮತ್ತು ಜನರಲ್ ಮ್ಯಾನೇಜರ್, ಕೊಳ್ಳೇಗಾಲ ಕಾರ್ಖಾನೆಯ ವೈಸ್ ಮ್ಯಾನೇಜರ್‌ರವರು ಬಂದಿದ್ದರು, ಎಲ್ಲರ ಜೊತೆ ಮುಖ್ಯಮಂತ್ರಿಗಳ ಆದೇಶದ ಮೇರೆಗೆ ನಿನ್ನೆಯ ದಿವಸ ಮೀಟಿಂಗ್‌ನ್ನು ನಡೆಸಿದ್ದೇವೆ. ತಾವು 8- 10 ದಿವಸಗಳ ಕಾಲ ಕಾಯಬೇಕು, ರೈತರಿಗಾಗಿರುವ ಅನಾನುಕೂಲಗಳೇನು ಇವೆ, ಆ ವಿಚಾರದ ಬಗ್ಗೆ ಸರ್ಕಾರ ಸಂಪೂರ್ಣವಾಗಿ ಅರಿತಿದೆ. ಆ ಬದ್ಧತೆಯನ್ನು ಇಟ್ಟುಕೊಂಡು ಪರಿಹಾರ ತೆಗೆದುಕೊಳ್ಳುವುದರಲ್ಲಿ ನಾನು ನಿಮ್ಮೊಡನೆ ಇರುತ್ತೇನೆಂದು ಈ ಸದನದ ಮುಖೇನ ಸದಸ್ಯರಿಗೆ ತಿಳಿಸಬಯಸುತ್ತೇನೆ.